ಓ ಎಸ್ ನಂ. 223/2022

ಡಿ ಡಬ್ಲ್ಯೂ: 1

ದಿನಾಂಕ 03/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ: ಶ್ರೀ ಎಂ ಎನ್ ವಕೀಲರಿಂದ:

ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ-1 ರ ದಾಖಲೆಯನ್ನು ತೋರಿಸಿ ಅದರಲ್ಲಿರುವ ಎಲ್ಲಾ ಪುಟಗಳಲ್ಲಿ ನಾನು, ನನ್ನ ಮಕ್ಕಳಾದ ನವ್ಯ ಮತ್ತು ನೂತನ್ ಹಾಗೂ ನನ್ನ ಸಹೋದರಿಯಾದ ಕರಿಯಮ್ಮರವರು ಸಹಿ ಮಾಡಿರುತ್ತೀರಿ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿರುತ್ತಾರೆ. ಸಾಕ್ಷಿಗೆ ನಿಪಿ-1 ರ ಕೊನೆಯ ಪುಟದಲ್ಲಿ ಈಗಾಗಲೇ ಗುರುತಿಸಿರುವ ನಿಪಿ-1(ಎ) ರಿಂದ 1(ಡಿ) ಸಹಿಗಳನ್ನು ತೋರಿಸಿ ಕೇಳಲಾಗಿ ಸದರಿ ಸಹಿ ತನ್ನ, ತನ್ನ ಮಕ್ಕಳ ಮತ್ತು ಸಹೋದರಿ ಸಹಿ ಎಂದು ನೋಡಿ ಗುರುತಿಸಿರುತ್ತಾರೆ. ನಾನು ಯಾವುದೇ ಪತ್ರಕ್ಕೆ ಸಹಿ ಮಾಡಬೇಕಾದರೆ ಅದರಲ್ಲಿರುವ ಒಕ್ಕಣಿಕೆಯನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ನಿಪಿ-1 ರ ಪತ್ರದ ವ್ಯವಹಾರಕ್ಕೆ ಸಂಬಂದಪಟ್ಟಂತೆ ವಾದಿ ನನಗೆ 26/08/2020 ರಂದು ನಿಪಿ-3 ರಂತೆ ನೋಟೀಸನ್ನುನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸನ್ನು ನನಗಲ್ಲದೆ ನನ್ನ ಮಕ್ಕಳು ಮತ್ತು ನನ್ನ ಸಹೋದರಿ ಎಲ್ಲಾರಿಗೂ ಸಹ ಕಳುಹಿಸಲಾಗಿತ್ತು ಎಂದರೆ ಸರಿ. ವಾದಿ ನಮಗೆ ಕಳುಹಿಸಿದ ನೋಟಿಸಿಗೆ ನಾವು ಲಿಖಿತ ಪ್ರತ್ಯುತ್ತರ ನೀಡಿರುತ್ತೇವಾ ಎಂದರೆ ಸಾಕ್ಷಿ ಇಲ್ಲ ಆದರೆ ವಾದಿಗೆ ಮೌಖಿಕವಾಗಿ ವಿಚಾರ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ನೋಟೀಸನ್ನು ಪಡೆದ ನಂತರ ನಾನು ವಾದಿ ಬಳಿ ಇನ್ನೆರೆಡು ವರ್ಷ ಕಾಲಾವಕಾಶ ಕೊಡಬೇಕೆಂದು ಕೇಳಿಕೊಂಡಿದ್ದೆ ಎಂದರೆ ಸರಿಯಲ್ಲ. ನಂತರ ದಿನಾಂಕ 26/09/2022 ರಂದು ನಿಪಿ-4 ರಂತೆ ವಾದಿ ನನಗೆ ಮತ್ತು ಇತರೆ

ಪ್ರತಿವಾದಿಗಳಿಗೆ ಮತ್ತೊಂದು ನೋಟೀಸು ನೀಡಿದ್ದರು ಎಂದರೆ ಸರಿ. ಸದರಿ ನೋಟೀಸಿಗೆ ನಾವುಗಳು ಲಿಖಿತವಾಗಿ ಪ್ರತ್ಯುತ್ತರ ನೀಡಿರುವುದಿಲ್ಲ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಪಿ-4 ರ ನೋಟೀಸನ್ನು ನಾನು ಮತ್ತು ಇತರೆ ಪ್ರತಿವಾದಿಗಳು ನಿಪಿ-13 ರಿಂದ 16 ರ ಅಂಚೆ ಸ್ವೀಕೃತಿಯಂತೆ ಪಡೆದಿರುತ್ತೇವೆ ಎಂದರೆ ಸರಿ. ಮೇಲ್ಕಂಡಂತೆ ನೋಟೀಸುಗಳನ್ನು ಪಡೆದುಕೊಂಡ ನಂತರ ವಾದಿಗೆ ಲಿಖಿತವಾಗಿ ಪ್ರತ್ಯುತ್ತರ ನೀಡಿಲು ಪ್ರತಿವಾದಿಗಳ ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನನಗೆ ಚೆಲುವರಾಜು ಮತ್ತು ಶ್ರೀನಿವಾಸ್‌ರವರ ಪರಿಚಯ ಎಷ್ಟು ವರ್ಷಗಳಿಂದ ಇದೆ ಎಂದರೆ ಸಾಕ್ಷಿ ಸುಮಾರು 10 ವರ್ಷಗಳಿಂದ ಇದೆ ಎಂದು ನುಡಿಯುತ್ತಾರೆ. ಸದರಿಯವರ ಬಳಿ ನನಗೆ ಹಣದ ವ್ಯವಹಾರ ಇತ್ತು ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಚೆಲುವರಾಜುರವರ ಬಳಿ ನನ್ನ ಯಾವುದೇ ಹಣದ ವ್ಯವಹಾರ ಇರಲಿಲ್ಲವೇ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಪಿ-1 ರ ದಾಖಲೆಯನ್ನು ಮಾಡುವ ಸಮಯದಲ್ಲಿ ಮೇಲೆ ಹೇಳಿದ ಚೆಲುವರಾಜು ಮತ್ತು ಅಂತರಘಟ್ಟೆಯ ರಂಗನಾಥರವರು ಹಾಜರಿದ್ದರು ಎಂದರೆ ಸರಿ. ನಿಪಿ-1 ರ ಪತ್ರವನ್ನು ಮಲ್ಲಿಕಾರ್ಜುನ್ ವಕೀಲರು ತಯಾರಿಸಿದ್ದರು ಎಂದರೆ ಸರಿ. ಸದರಿ ಮಲ್ಲಿಕಾರ್ಜುನ ವಕೀಲರು ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನಿಪಿ-1 ರ ಪತ್ರದಂತೆ ಪ್ರತಿವಾದಿಗಳಾದ ನಾವು ನಡೆದುಕೊಂಡಿಲ್ಲ ಎಂದರೆ ಸಾಕ್ಷಿ ಸದರಿ ಪತ್ರದಂತೆ ನಾವು ನಡೆದುಕೊಂಡಿದ್ದು, ವಾದಿ ಕೇಳಿದಂತೆ 15 ದಿನಕ್ಕೆ ತಿಂಗಳಿಗೊಮ್ಮೆ ಚೆಕ್ಕು ಮೂಲಕ ಹಣವನ್ನು ವಾಪಸು ನೀಡಿರುತ್ತೇವೆ ಎಂದು ನುಡಿಯುತ್ತಾರೆ.

ನಿಪಿ-1 ರ ದಾಖಲೆಯಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-1 ರ ದಾಖಲೆ ಕ್ರಯದ ಕರಾರು ಪತ್ರವಾಗಿದ್ದು ಅದರಂತೆ ಪ್ರತಿವಾದಿಗಳಾದ ನಾವು ವಾದಿಗೆ ದಾವಾ ಸ್ವತ್ತನ್ನು

7.5 ಲಕ್ಷ ರೂಗಳಿಗೆ ಮಾರಾಟ ಮಾಡಲು ಒಪ್ಪಿ ಅದರಲ್ಲಿ 7 ಲಕ್ಷ ಹಣವನ್ನು ಮುಂಗಡವಾಗಿ ಪಡೆಯಲಾಗಿದೆ ಎಂದು ಸದರಿ ಕರಾರು ಪತ್ರದಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿ ಸದರಿ ದಾಖಲೆಯಲ್ಲಿ ಆ ರೀತಿ ಬರವಣಿಗೆ ಆಗಿದೆ ಆದರೆ ಆ ದಾಖಲೆಯನ್ನು ನಾವು ವಾದಿಯಿಂದ 7.5 ಲಕ್ಷ ಪಡೆದುಕೊಂಡು ಸದರಿ ಹಣದ ಭದ್ರತೆಗಾಗಿ ಬರೆದುಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಕರಾರು ಪತ್ರದ ಪುಟ ಸಂಖ್ಯೆ 4 ರಲ್ಲಿ ಕ್ರಯದ ಕರಾರಿನ ಬಾಬ್ತು ಕ್ರಯಪತ್ರವನ್ನು ಬರೆದುಕೊಡಲು ಅವಶ್ಯ ಇರುವ 11-ಇ ಸ್ಕೆಚ್ ಮತ್ತು ಇರತರೇ ದಾಖಲೆಗಳನ್ನು ತಯಾರಿಸಿಕೊಂಡು ಕ್ರಯಪತ್ರವನ್ನು ಬರೆದುಕೊಡಲು ನಾವು ಬಾದ್ಯಸ್ಥರಾಗಿರುತ್ತೆವೆಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-1 ರ ಕರಾರುಪತ್ರದಲ್ಲಿ ನಮೂದಿರುವ ನಿಬಂಧನೆಗಳಂತೆ ನಾವು ನಡೆದುಕೊಂಡಿಲ್ಲ ಎಂದರೆ ಸಾಕ್ಷಿ ನಾವು ನಿಬಂಧನೆಗಂತೆ ನಡೆದುಕೊಂಡಿರುತ್ತೇವೆ ಆದರೆ ದಿನಾಂಕ 05/03/2018 ರಂದು ಪತ್ರ ಪಡೆದುಕೊಂಡು ಅದನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರ ಪತ್ರದ ಪ್ರಕಾರ ನಡೆದುಕೊಳ್ಳುವಂತೆ ವಾದಿ ನಮ್ಮ ಮನೆಗೆ ಬಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿ. ಆದರೂ ಸಹ ನಾವು ನಿಪಿ-1 ರ ನಿಬಂಧನೆಗಳಂತೆ ನಡೆದುಕೊಂಡಿಲ್ಲ ಎಂದರೆ ಸಾಕ್ಷಿ ವಾದಿ  ನಮ್ಮ ಬಳಿ ಬಡ್ಡಿ ಸೇರಿಸಿ ಹಣ ವಾಪಸು ಕೊಡುವಂತೆ ಕೇಳಿದ್ದು ಆದರೆ ನಾವು ದಾಖಲೆಯನ್ನು ಹಣಕ್ಕೆ ಆಧಾರ ಮಾಡಿಕೊಟ್ಟಿದ್ದು ಬಡ್ಡಿಯ ಬಗ್ಗೆ ಮತ್ತು ಮಾರಾಟದ ಬಗ್ಗೆ ಯಾವುದೇ ಮಾತುಕತೆಯಾಗಿರಲಿಲ್ಲ ಹಣವನ್ನು ವಾಪಸು ನೀಡಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-1 ರ ಕರಾರುಪತ್ರದಂತೆ ವಾದಿ ನನ್ನ ಬಳಿ ಎಷ್ಟು ಬಾರಿ ಬಂದಿರುತ್ತಾರೆ ಎಂದರೆ ಸಾಕ್ಷಿ ಒಮ್ಮೆ ಮಾತ್ರ ಎಂದು ನುಡಿಯುತ್ತಾರೆ. ವಾದಿಯಿಂದ 7.5 ಲಕ್ಷ ರೂಗಳನ್ನು ಪ್ರತಿವಾದಿಗಳಾದ ನಾವುಗಳು ಪಡೆದ ಬಗ್ಗೆ ಎದುರುಕರಾರು ಪತ್ರವನ್ನು ಏನನ್ನಾದರೂ ಮಾಡಿರುತ್ತೇವಾ ಎಂದರೆ ಸಾಕ್ಷಿ

ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ನಿಪಿ-1 ರ ಪತ್ರದಂತೆ ಹಣದ ವ್ಯವಹಾರ ಆಗಿದೆ ಎಂದು ನುಡಿಯುತ್ತಾರೆ. 7.5 ಲಕ್ಷ ರೂ ಹಣವನ್ನು ಬಡ್ಡಿಗೆ ಪಡೆದಿದ್ದು ಅದನ್ನು ವಾದಿ ಕೇಳಿದಂತೆ ಮರುಪಾವತಿ ಮಾಡುವುದಾಗಿ ಪತ್ರ ಮಾಡಿಕೊಳ್ಳಲು ತೊಂದರೆ ಇತ್ತು ಎಂದರೆ ಸಾಕ್ಷಿ ಯಾವುದೇ ತೊಂದರೆ ಇರಲಿಲ್ಲ ವಾದಿ ಮತ್ತು ನಮ್ಮ ನಡುವೆ ವಿಶ್ವಾಸ ಇತ್ತು ಎಂದು ನುಡಿಯುತ್ತಾರೆ. ನಿಪಿ-1 ರ ದಾಖಲೆಯಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ 7.5 ಲಕ್ಷ ರೂಗಳನ್ನು ಬಡ್ಡಿರಹಿತವಾಗಿ ವಾದಿಯಿಂದ ಸಾಲ ಪಡೆದಿರುತ್ತೇವೆ ಮತ್ತು ವಾದಿ ಕೇಳಿದಂತೆ ಮರುಪಾವತಿ ಮಾಡುತ್ತೇವೆ ಎಂಬ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ.

ನಿಡಿ-2 ಮತ್ತು 3 ರ ದಾಖಲೆಯಂತೆ ಬ್ಯಾಂಕ್ ಖಾತೆ ನರಸಿಂಹಮೂರ್ತಿ ಮತ್ತು ಚೆಲುವರಾಜುರವರ ಜಂಟಿ ಖಾತೆಯಲ್ಲಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಜಂಟಿ ಖಾತೆಗೆ ನಾನು ಹಣ ಜಮೆ ಮಾಡಿರುವ ಬಗ್ಗೆ ಮೇಲ್ಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ನಮೂದಿರುವ 3 ಆಸ್ತಿಗಳಿಗೆ ಸಂಬಂದಪಟ್ಟಂತೆ ನಾನು ಚೆಲುವರಾಜುರವರ ಹೆಸರಿಗೆ ಯಾವುದೇ ಒಪ್ಪಂದ ಪತ್ರ ಮಾಡಿರುವುದಿಲ್ಲ ಎಂದರೆ ಸರಿ. ನಿಡಿ-2 ಮತ್ತು 3 ರಲ್ಲಿ ಕಾಣಿಸಿರುವ ಹಣದ ಸಂಬಂದ ಚೆಲುವರಾಜುರವರಿಂದಾಗಲಿ ಅಥವಾ ನರಸಿಂಹಮೂರ್ತಿರವರಿಂದಾಗಲಿ ಏನಾದರೂ ಬರೆಸಿಕೊಂಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಡಿ-4 ರ ದಾಖಲೆಯಂತೆ ಯಾವ ವಿಚಾರಕ್ಕಾಗಿ ಹಣ ಸಂದಾಯ ಮಾಡಲಾಗಿದೆ ಎಂಬುದಾಗಿ ಯಾವುದೇ

ಪತ್ರವನ್ನು ಮೇಲ್ಕಂಡ ಚೆಲುವರಾಜು ಮತ್ತು ನರಸಿಂಹಮೂರ್ತಿರವರಿಂದ ಬರೆಸಿಕೊಂಡಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ೯ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.